## ಎಂವಿಸಿ ಸಂಖ್ಯೆ: 1359/2022 ಆರ್.ಡಬ್ಲೂ: 1

## ದಿನಾಂಕ: 18-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.

## ಮುಖ್ಯ ವಿಚಾರಣೆ: ಎದುರುದಾರರ ಪರ ವಕೀಲರಿಂದ:

ನನ್ನ ಮುಖ್ಯ ವಿಚಾರಣೆಯ ಬಾಬ್ತು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿ ಬರೆಸಿರುವ ಎಲ್ಲ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿ ಬರೆದಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಸಾಕ್ಷಿದಾರರು ದಾಖಲಾತಿಗಳನ್ನು ನೋಡಿ ಗುರುತಿಸಿರುತ್ತಾರೆ.

1. ಅಧಿಕಾರ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಆರ್-1 ಎಂದು ಗುರುತಿಸಲಾಯಿತು.
2. ವಿಮಾ ಪಾಲಿಸಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಆರ್-2 ಎಂದು ಗುರುತಿಸಲಾಯಿತು.

## ಪಾಟೀ ಸವಾಲು: ಅರ್ಜಿದಾರರ ಪರ ವಕೀಲರಿಂದ

ಅಪಘಾತ ಸಮಯದಲ್ಲಿ ಅಪಘಾತಡಿಸಿದ ವಾಹನಕ್ಕೆ ವಿಮಾ ಪಾಲಿಸಿ ಚಾಲ್ತಿಯಲ್ಲಿತ್ತು. ಅಪಘಾತ ಸಮಯದಲ್ಲಿ ವಾಹನದ ಚಾಲಕನಿಗೆ ಡಿಎಲ್, ವಾಹನದ ಪರ್ಮಿಟ್, ಫಿಟ್ನೆಸ್ ಸರ್ಟಿಫಿಕೇಟ್ ಇತ್ತು ಎಂದರೆ ಸರಿ ಅಲ್ಲ. ಡಿಎಲ್ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಡಿಎಲ್ ಅವಧಿ ಮುಗಿದ 1 ತಿಂಗಳವರೆಗೆ ಅದನ್ನು ನವೀಕರಿಸಲು ಕಾಲಾವಕಾಶ ಇರುತ್ತದೆ ಎಂದರೆ ಇರಬಹುದು. ಅದೇ ರೀತಿ ಫಿಟ್ನೆಸ್ ಸರ್ಟಿಫಿಕೇಟ್ ಮತ್ತು ವಾಹನದ ಪರವಾನಗಿಗೋಸ್ಕರ ವಿಸ್ತರಣೆ ಅವಧಿ ಇರುತ್ತದೆ ಎಂದರೆ ಇರಬಹುದು ಅಥವಾ ಇರದೇ ಇರಬಹುದು ಎಂದು ಹೇಳುತ್ತಾರೆ. ಕಂಪನಿಯಿಂದ ತನಿಖೆಗೊಳಪಡಿಸಿ ದಾಖಲೆಗಳನ್ನು ತರಿಸಿಕೊಂಡಿರುತ್ತೇವೆ ಎಂದರೆ ನಿಜ. ಚಾಲಾನಾ ಪ್ರಮಾಣ ಪತ್ರ ಈಗಲೂ ಕೂಡ ಆನ್ಲೈನ್‌ನಲ್ಲಿ ನೋಡಿದರೆ ಇದೆ ಎಂದು ಕಂಡು ಬರುತ್ತದೆ ಎಂದರೆ ನಾನು ನೋಡಲು ಹೋಗಿಲ್ಲ ಎಂದು ಹೇಳುತ್ತಾರೆ. ಅರ್ಜಿದಾರರಿಗೆ ಪರಿಹಾರ ಕೊಡಬೇಕಾಗುತ್ತದೆ ಎಂದು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

**ಪ್ರಭಾರ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರ.**

ಸಾಕ್ಷಿದಾರರ ಸಹಿಃ